ತನ್ಮೂಲಕ ರೈತ ಸದಸ್ಯರು ಆ ಸಾಲಗಳನ್ನು ಮೂರು ವಾರ್ಷಿಕ ಸಮ ಕಂತುಗಳಲ್ಲಿ ಮರು ಪಾವತಿ ಮಾಡಬಹುದಾದ ಸೌಲಭ್ಯಗಳನ್ನು ಕಲ್ಪಿಸಲಾಗುವುದು.

ಆ) ಅಂತಹ ಪ್ರದೇಶಗಳಲ್ಲಿನ ರೈತರ ಬೆಳೆ ಇಳುವರಿ 6 ಆಣೆಗಿಂತ ಕಡಿಮೆ ಎಂಬುದಾಗಿ ಕಂದಾಯ ಇಲಾಖೆಯು ಆಣೆವಾರಿಯನ್ನು ಘೋಷಿಸಿದ್ದಲ್ಲ, ಸಹಕಾರ ಸಂಘಗಳಿಂದ ರೈತರು ಪಡೆದುಕೊಂಡಂತಹ ಅಲ್ಪಾವಧಿ ಬೆಳೆ ಸಾಲಗಳನ್ನು ನಬಾರ್ಡ್ ವಿಧಿಸಿರುವ ಷರತ್ತುಗಳ ರೀತ್ಯಾ ಮಧ್ಯಮಾವಧಿ ಸಾಲಗಳನ್ನಾಗಿ ಪರಿವರ್ತಿಸಲಾಗುವುದು.

ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಬಡ್ಡಿ ರಿಯಾಯಿತಿ.

925 - ಶ್ರೀ ಅಲ್ಲಂ ವೀರಭದ್ರಪ್ಪ (ಕೆರೆಗೊಡು): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಸಾಕಷ್ಟು ಬೆಳೆಗಳು ಹಾನಿಯಾಗಿರುವುದು ನಿಜವೇ?

ಆ) ಹಾಗಿದ್ದಲ್ಲಿ ಆ ಪ್ರದೇಶಗಳ ರೈತರು ಕೊಡಬೇಕಾದ ಭೂ ಕಂದಾಯ ತೆರಿಗೆ ಹಾಗೂಸಹಕಾರ ಸಂಘಗಳ ಸಾಲದ ಹಣಕ್ಕೆ ಸರ್ಕಾರವು ಬಡ್ಡಿ ರಿಯಾಯಿತಿ ನೀಡುವುದೇ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):

ಅ) ಹೌದು.

ಆ) ಪ್ರವಾಹ ಪೀಡಿತ ಜಿಲ್ಲೆಗಳಲ್ಲಿ ಭೂ ಕಂದಾಯ ತೆರಿಗೆ ಮನ್ನಾ ಮಾಡಲು, ಭೂ ಕಂದಾಯ ಕಾಯಿದೆ 1964ರ ಕಾಲಂ 194 ಮತ್ತು ನಿಯಮ 147 ರ ಪ್ರಕಾರ ಜಿಲ್ಲೆಯ ಜಿಲ್ಲಾಧಿಕಾರಿಗಳು, ಬೆಳೆ ಆಣೆವಾರಿ ನಿರ್ಧರಿಸಿ ಕ್ರಮ ಕೈಗೊಳ್ಳಲು ಸರ್ಕಾರವು ಆದೇಶಿಸಿದೆ.

ಆದರೆ ಸಹಕಾರ ಸಂಘದಿಂದ ರೈತರು ಪಡೆದಿರುವ ಸಾಲದ ಮೇಲಿರುವ ಬಡ್ಡಿಯನ್ನು ರಿಯಾಯಿತಿ ಮಾಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿಲ್ಲ.

ದಕ್ಷಿಣ ಕನ್ನಡದ ಭೂ ನ್ಯಾಯ ಮಂಡಳಿ ಪ್ರಕರಣಗಳು

1039 - ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂ ನ್ಯಾಯ ಮಂಡಲಿಗಳಲ್ಲಿ ಇತ್ಯರ್ಥಕ್ಕೊಳಗಾಗಿರುವ ಪ್ರಕರಣಗಳೆಷ್ಟು?

ಆ) ಜಿಲ್ಲೆಯ ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟಿವೆ (ವಿವರ ನೀಡುವುದು)

ಇ) ಈ ಅರ್ಜಿಗಳ ಇತ್ಯರ್ಥಕ್ಕೆ ಇನ್ನೆಷ್ಟು ಕಾಲ ಬೇಕಾಗಬಹುದು? ಎಲ್ಲೆಲ್ಲಿ ಭೂ ನ್ಯಾಯ ಮಂಡಳಿಗಳಿವೆ? ಅವ್ಯವಹಾರ ನಡೆಸುವ ಭೂ ನ್ಯಾಯ ಮಂಡಳಿಗಳ ಬಗ್ಗೆ ದೂರುಗಳಿವೆಯೇ?

ಈ) ಭೂ ನ್ಯಾಯ ಮಂಡಳಿಗಳಿಗೆ ಅತ್ಯಂತ ಅರ್ಹರನ್ನು ನೇಮಕ ಮಾಡಲಾಗುವುದೇ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):

ಅ) 3414 ಪ್ರಕರಣಗಳು

ಆ) ಇತ್ಯರ್ಥಕ್ಕೆ ಬಾಕಿ ಇರುವ ಪ್ರಕರಣಗಳ ವಿವರಗಳು (ತಾಲ್ಲೂಕುವಾರು)

1) ಕುಂದಾಪುರ	387
2) ಉಡುಪಿ	759
3) ಕಾರ್ಕಳ	450
4) ಮಂಗಳೂರು	1039
5) ಭಂಟ್ವಾಳ	739
6) ಪುತ್ತೂರು	17
7) ಬೆಳ್ತಂಗಡಿ	16
8) ಸೂಳ್ಯೆ	7
ಒಟ್ಟು	3414

ಆ) ಪ್ರಕರಣಗಳು ಭೂ ನ್ಯಾಯ ಮಂಡಲಿಗಳಲ್ಲಿ ಇತ್ಯರ್ಥಕ್ಕೆ ಬಾಕಿ ಇರುವುದರಿಂದ ಇಂತಿಷ್ಟೇ ಸಮಯದಲ್ಲಿ ಪ್ರಕರಣಗಳನ್ನು ಇಯರ್ಥಗೊಳಿಸಲಾಗುವುದೆಂದು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರತಿ ತಾಲ್ಲೂಕಿನಲ್ಲಿ ಒಂದೊಂದು ಭೂ ನ್ಯಾಯ ಮಂಡಲಿ ಇರುತ್ತದೆ. ಸರ್ಕಾರದ ಆದೇಶದ ಸಂಖ್ಯೆ ಆರ್ ಡಿ 17ಎಲ್ ಆರ್ ಇ 88 (ಪಿ) ದಿನಾಂಕ : 22:25-5-92ರಲ್ಲಿ ಮಂಗಳೂರು, ಬಂಟ್ವಾಳ ಉಡುಪಿ ಮತ್ತು ಕಾರ್ಕಳ ತಾಲ್ಲೂಕಿನಲ್ಲಿ ಒಂದೊಂದು ಹೆಚ್ಚುವರಿ ಭೂ ನ್ಯಾಯ ಮಂಡಳಿಯನ್ನು ಮಂಜೂರು ಮಾಡಲಾಗಿದೆ.

ಭೂ ನ್ಯಾಯ ಮಂಡಲಿಗಳು ಆವ್ಯವಹಾರ ನಡೆಸುವ ಬಗ್ಗೆ ದೂರುಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಈ) ಭೂ ನ್ಯಾಯ ಮಂಡಲಿಗೆ ಅಧ್ಯಕ್ಷರನ್ನು ಮತ್ತು ಸದಸ್ಯರುಗಳನ್ನು ಕಾನೂನು ಚೌಕಟ್ಟಿನಲ್ಲಿ ಅರ್ಹತೆ ಮೇಲೆಯೇ ನೇಮಕ ಮಾಡಲಾಗುವುದು.

ದೊಡ್ಡಬಳ್ಳಾಪುರ ಕ್ಷೇತ್ರದಲ್ಲಿ ನೆರೆ ಹಾವಳಿ ಪರಿಹಾರ ಕಾರ್ಯಕ್ಕೆ ಖರ್ಚಾದ ಹಣ.

1060 - ಶ್ರೀ ಆರ್.ಎಲ್. ಜಾಲಪ್ಪ (ದೊಡ್ಡಬಳ್ಳಾಪುರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದೊಡ್ಡ ಬಳ್ಳಾಪುರ ಕ್ಷೇತ್ರದಲ್ಲಿ 1991ರ ಅಕ್ಟೋಬರ್ ಮತ್ತು ನವೆಂಬರ್ ತಿಂಗಳಲ್ಲಿ ಉಂಟಾದ ಅತಿವೃಷ್ಟಿಯ ಪರಿಣಾಮವಾಗಿ, ರಸ್ತೆಗಳು, ಚರಂಡಿಗಳು, ಕೆರೆಗಳು ಮತ್ತು ಇತರ ದುರಸ್ತಿಗೋಸ್ಕರ ಬಿಡುಗಡೆ ಮಾಡಿದ ಹಣದ ಮೊತ್ತವೆಷ್ಟು?

ಆ) ಇಲ್ಲಿಯವರೆಗೆ ಖರ್ಚು ಮಾಡಲಾದ ಹಣವೆಷ್ಟು?
(ವಾರ್ಷಿಕ ಅಂಕಿ ಅಂಶಗಳನ್ನೊದಗಿಸುವುದು)

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):

ಅ) ಈ ದುರಸ್ತಿಗೋಸ್ಕರ ಬಿಡುಗಡೆ ಮಾಡಿದ ಮೊತ್ತ ರೂ. 6,04,634.00

ಆ) ಇಲ್ಲಿಯವರೆಗೆ ಖರ್ಚು ಮಾಡಲಾದ ಹಣದ ವಿವರ ಈ ಕೆಳಗಿನಂತಿದೆ.

1991-92	ರೂ. 218978.00
1992-93	ರೂ. 385656.00
ಒಟ್ಟು ಮೊತ್ತ	**ರೂ. 604634.00**